ಕಳೆದ 3 ತಿಂಗಳ ಅವಧಿಯಲ್ಲಿ ರೇಷನ್ ಕಾರ್ಡುಗಳು ಲಭ್ಯವಿರಲಿಲ್ಲ. ನವೆಂಬರ್ 2002ರಲ್ಲಿ 10000 ಕಾರ್ಡುಗಳನ್ನು ಧಾರವಾಡ ಜಿಲ್ಲೆಗೆ ಬಿಡುಗಡೆ ಮಾಡಿದ್ದು, ಈಗ ಹೊಸ ಕಾರ್ಡುಗಳ ಕೊರತೆ ಇರುವುದಿಲ್ಲ.

ಬಾಲಕಾರ್ಮಿಕ ಕಲ್ಯಾಣ

1850(2191): ಶ್ರೀ ಹೊನ್ನಳ್ಳಿ ಜಬ್ಬಾರ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರ ನೀಡುವುದು.

ಆ. ಬಾಲ ಕಾರ್ಮಿಕರಿಗಾಗಿ ಕಲ್ಯಾಣ ಯೋಜನೆಯನ್ನು ಸರ್ಕಾರ ಕೈಗೊಂಡಿದೆಯೆ?

ಇ. ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಸಮಿತಿ ರಚಿಸಲಾಗಿದೆಯೇ. ಇಲ್ಲವಾದಲ್ಲಿ ಕಾರಣವೇನು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ. ರಾಜ್ಯಾದ್ಯಂತ ಬಾಲ ಕಾರ್ಮಿಕ ಸಮೀಕ್ಷೆಯನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆದ 39.300 ಬಾಲ ಕಾರ್ಮಿಕರನ್ನು ಗುರುತಿಸಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ಹೌದು.

ಕೇಂದ್ರ ಸರ್ಕಾರದ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಅಡಿಯಲ್ಲಿ ಏಳು ಜಿಲ್ಲೆಗಳಲ್ಲಿ ಅಂದರೆ ಬೆಂಗಳೂರು (ಗ್ರಾಮಾಂತರ), ಬೆಂಗಳೂರು (ನಗರ), ಬಿಜಾಪುರ, ಧಾರವಾಡ, ಗದಗ, ಹಾವೇರಿ, ರಾಯಚೂರು ಜಿಲ್ಲೆಗಳಲ್ಲಿ ಪ್ರತಿ ಶಾಲೆಗೆ 50 ಮಕ್ಕಳಂತೆ 190 ವಿಶೇಷ ಶಾಲೆಗಳನ್ನು ಮಂಜೂರು ಮಾಡಿದ್ದು ಅವುಗಳ ಪೈಕಿ 176 ಶಾಲೆಗಳು ನಡೆಯುತ್ತಿದ್ದು ಆ ವಿಶೇಷ ಶಾಲೆಗಳಲ್ಲಿ ಬಾಲ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಲು ಅಂದರೆ ಅನೌಪಚಾರಿಕ ಶಿಕ್ಷಣ, ಪೌಷ್ಟಿಕ ಆಹಾರ, ಆರೋಗ್ಯ ತಪಾಸಣೆ ಮುಂತಾದವುಗಳ ಮೂಲಕ ಅವರಿಗೆ ವಿದ್ಯಾಭ್ಯಾಸವನ್ನು ಕಲ್ಪಿಸಿ ಅರ್ಹ ವಿದ್ಯಾರ್ಥಿಗಳನ್ನು ಮುಖ್ಯವಾಹಿನಿ ಶಾಲೆಗಳಿಗೆ ಸೇರಿಸಲಾಗುತ್ತಿದೆ.

ಅಲ್ಲದೆ ರಾಜ್ಯ ಸರ್ಕಾರವು ರಾಜ್ಯ ಬಾಲ ಕಾರ್ಮಿಕ ಕ್ರಿಯಾ ಯೋಜನೆ ಅಡಿಯಲ್ಲಿ ಉಳಿದ 20 ಜಿಲ್ಲೆಗಳಲ್ಲಿ ಪ್ರತಿ ಶಾಲೆಗೆ 50 ಮಕ್ಕಳಂತೆ 100 ವಿಶೇಷ ವಸತಿ ಶಾಲೆಗಳನ್ನು ಮಂಜೂರು ಮಾಡಿದ್ದು ಅವುಗಳ ಪೈಕಿ 37 ಶಾಲೆಗಳು ನಡೆಯುತ್ತಿವೆ. ಸದರಿ ವಿಶೇಷ ವಸತಿ ಶಾಲೆಗಳಲ್ಲಿ ಬಾಲ ಕಾರ್ಮಿಕರಿಗೆ ವಸತಿ, ಆಹಾರ, ಅನೌಪಚಾರಿಕ ಶಿಕ್ಷಣ ನೀಡಿ ಶಿಕ್ಷಣದ ಕಡೆ ಮನವಲಿಸಿ ಮುಖ್ಯವಾಹಿನಿ ಶಾಲೆಗಳಲ್ಲಿ ಅರ್ಹ ತಂರಗತಿಗಳಿಗೆ ದಾಖಲಿಸಿ ಅವರ ವಿದ್ಯಾಭ್ಯಾಸವನ್ನು ಮುಂದುವರೆಸುವ ಕಲ್ಯಾಣ ಕ್ರಮಗಳನ್ನು ಜರುಗಿಸಲಾಗುತ್ತಿದೆ.

ಇ. ಹೌದು ರಚಿಸಲಾಗಿದೆ.

ರಾಜ್ಯ ಬಾಲ ಕಾರ್ಮಿಕ ಕ್ರಿಯಾ ಯೋಜನೆ ಅಡಿಯಲ್ಲಿ ಬಾಲ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಜಿಲ್ಲಾ ಮಟ್ಟದ ಸಲಹಾ ಸಮಿತಿಯನ್ನು ಹಾಗೂ ಒಂದು ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಗಳು ಬಾಲ ಕಾರ್ಮಿಕರ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡುತ್ತದೆ.

ಅನುಬಂಧ

ಜಿಲ್ಲಾ ಆಡಳಿತ ಸಮೀಕ್ಷೆಯಲ್ಲಿ ಗುರುತಿಸಿದ ಬಾಲ ಕಾರ್ಮಿಕರ ಜಿಲ್ಲಾವಾರು ವಿವರಗಳು

ಕ್ರ.	ಜಿಲ್ಲೆಯ ಹೆಸರು	ಅಪಾಯಕಾರಿ ಉದ್ಯಮಗಳಲ್ಲಿನ ಬಾಲ ಕಾರ್ಮಿಕರು	ಅಪಾಯಕಾರಿ ಅಲ್ಲದ ಉದ್ಯಮದಲ್ಲಿ ಬಾಲಕಾರ್ಮಿಕರು	ಒಟ್ಟು
1.	ಬೆಂಗಳೂರು (ನಗರ)	938	876	1814
2.	ಬೆಂಗಳೂರು (ಗ್ರಾ)	1894	739	2633
3.	ಬಾಗಲಕೋಟೆ	334	338	672
4.	ಬೆಳಗಾಂ	36	84	120
5.	ಬಳ್ಳಾರಿ	382	3853	4235
6.	ಬೀದರ್	65	299	364
7.	ಬಿಜಾಪುರ	102	656	758
8.	ಚಾಮರಾಜನಗರ	117	84	201
9.	ಚಿಕ್ಕಮಗಳೂರು	90	45	135
10.	ಚಿತ್ರದುರ್ಗ	42	1019	1061
11.	ದಾವಣಗೆರೆ	419	9077	9496
12.	ದಕ್ಷಿಣ ಕನ್ನಡ	28	24	52
13.	ಧಾರವಾಡ	41	53	94
14.	ಗದಗ	25	880	905
15.	ಗುಲ್ಬರ್ಗಾ	138	1254	1392
16.	ಹಾಸನ	81	78	159
17.	ಹಾವೇರಿ	56	1040	1096
18.	ಕೊಡಗು	27	34	61
19.	ಕೊಪ್ಪಳ	105	269	374
20.	ಕೋಲಾರ	1382	1800	3182
21.	ಮಂಡ್ಯ	299	5668	5067
22.	ಮೈಸೂರು	107	368	565
23.	ರಾಯಚೂರು	105	1815	1920
24.	ಶಿವಮೊಗ್ಗ	44	44	88
25.	ತುಮಕೂರು	133	73	206
26.	ಉತ್ತರ ಕನ್ನಡ	3	1708	1711
27.	ಉಡುಪಿ	29	10	39
		7112	32188	39300